ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 48/2019 .

ಪ್ರಾ.ಸಾ.ಃ2

ಚಾ.ಸಾ.ಃ1

| | |
|---|---|
| ಹೆಸರು | ಃ ಶ್ರೀಮತಿ ಪ್ರಭಾ ಕಾರ್ಯಪ್ಪ |
| ಗಂಡನ ಹೆಸರು | ಃ ಕಾರ್ಯಪ್ಪ |
| ವಯಸ್ಸು | ಃ 35 ವರ್ಷ |
| ಉದ್ಯೋಗ | ಃ ಗೃಹಿಣಿ |
| ವಿಳಾಸ | ಃ ಬಿಟ್ಟಂಗಾಲ |

... ........................................................................................................ ...

ದಿನಾಂಕ 28 ನೇ ಮಾರ್ಚ್ 2022 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ ಃ -

ನಾನು 2017 ರಿಂದ ಜನವರಿ-2022 ರವರಿಗೆ ಗೋಣಿಕೊಪ್ಪದ ಕೂರ್ಗ್ ಡಯಾಗ್ನೆಸ್ಟಿಕ್ ಸೆಂಟರ್ ನಲ್ಲಿ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 25.05.2018 ರಲ್ಲಿ ನಾವು ಸಂಜೆ 6 ಗಂಟೆಗೆ ನಮ್ಮ ಸೆಂಟರ್ ಅನ್ನು ಕ್ಲೋಸ್ ಮಾಡಿಕೊಂಡು ಮನೆಗೆ ಹೋಗಿದ್ದೆವು. ಬೆಳಗ್ಗೆ 8 ಗಂಟೆಗೆ ನಾವು ಬಂದು ನೋಡಿದಾಗ ನಮ್ಮ ಸೆಂಟರ್ ನ ಒಳಗೆ ಇಟ್ಟಿದ್ದ ಸಾಮಾನುಗಳೆಲ್ಲವೂ ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ನಮ್ಮ ಶೌಚಾಲಯದ ಕಿಟಕಿಯ ರಾಡನ್ನು ಕತ್ತರಿಸಿ ಒಳಗೆ ನುಗ್ಗಿ ಸಿಸಿ ಟಿ ವಿ ಕ್ಯಾಮೆರಾಗಳನ್ನು ಆಕಡೆ ಈಕಡೆ ತಿರುಗಿಸಿ ನಮ್ಮ ಕ್ಯಾಶ್ ಡ್ರಾ ನಲ್ಲಿ ಇಟ್ಟಿದ್ದ ಸುಮಾರು 2 ಸಾವಿರದಷ್ಟು ಹಣವನ್ನು ಕಳ್ಳತನ ಮಾಡಿಕೊಂಡು ಹೋಗಿದ್ದರು. ತಕ್ಷಣವೇ ನಾವು ನಮ್ಮ ಸೆಂಟರ್ ನ ಮಾಲೀಕರಿಗೆ ದೂರವಾಣಿ ಮೂಲಕ ಮಾಹಿತಿ ಕೊಟ್ಟೆವು. ನಮ್ಮ ಮಾಲೀಕರ ಸಲಹೆಯಂತೆ ನಾನು ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿದ್ದೇನೆ. ಪ್ರಕರಣವನ್ನು ನೋಡಿದ ತಕ್ಷಣವೇ ದೂರು ಕೊಟ್ಟಿಲ್ಲ, ಕಾರಣ ನಮ್ಮ ಮಾಲೀಕರ ಅಭಿಪ್ರಾಯ ಪಡೆದು 2 ದಿನಗಳ ನಂತರ ದೂರು ಕೊಟ್ಟಿದ್ದೇನೆ.

ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ, ಸಾಕ್ಷಿಯು ಗುರುತಿಸಿರುವ ದಾಖಲೆಯು ದೂರು ಅರ್ಜಿಯಾಗಿದ್ದು ಅದನ್ನು ಈಗ ನಿ ಪಿ 2 ಎಂದು, ಸಾಕ್ಷಿಯ ಸಹಿ ನಿ ಪಿ 2 ಎ ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ದೂರು ಕೊಟ್ಟ ನಂತರ

ಪೊಲೀಸ್ ಸಿಬ್ಬಂದಿ ಜನರು ಸ್ಥಳಕ್ಕೆ ಬಂದು ಪ ರಿಶೀಲಿಸಿದರು. ಆ ಸಮಯದಲ್ಲಿ ನಮ್ಮ ಸೆಂಟರ್ ನ ಸಿಬ್ಬಂದಿ ಜನರಾದ ಚಾಸಾ 2 ಮತ್ತು 3 ರವರು ಸ್ಥಳದಲ್ಲಿ ಇದ್ದರು. ನಾನು ತೋರಿಸಿದ ಕೃತ್ಯ ಸ್ಥಳದಲ್ಲಿ ಪೊಲೀಸರು ಮಹಜರ್ ಕ್ರಮ ಕೈಗೊಂಡು ನನ್ನ ಸಹಿ ಪಡೆದಿರುತ್ತಾರೆ, ಸಾಕ್ಷಿಯು ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ ಪಿ 1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ ಪಿ 1 ಬಿ ಎಂದು ಗುರುತಿಸಲಾಯಿತು. ಸದರಿ ಮಹಜರ್ ಕಾಲಕ್ಕೆ ತೆಗೆದ ಫೋಟೋಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ನಿಪಿ 3 ಮತ್ತು 4 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸಲಾಗುವುದಿಲ್ಲ.

(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವಂತೆ ಕೋರಿಕೊಂಡ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ ಹಾಗೂ ಸ.ಸ.ಅ.ರವರ ವಾದವನ್ನು ಆಲಿಸಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)

ಪಾಟೀ ಸವಾಲುಃ- ಮಾನ್ಯ ಸ ಸ ಅ ರವರಿಂದ ಃ-

ನಿ ಪಿ 3 ರಲ್ಲಿ ಕಾಣುತ್ತಿರುವ ವ್ಯಕ್ತಿಯೇ ಈಗ ನ್ಯಾಯಾಲಯದ ಮುಂದಿರುವ ಆರೋಪಿಯಾಗಿರುತ್ತಾರೆ ಎಂದರೆ ಸರಿ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ.

ಕೂರ್ಗ್ ಡಯಾಗ್ನೆಸ್ಟಿಕ್ ಸೆಂಟರ್ ನಲ್ಲಿರುವ ಕ್ಯಾಶ್ ಕೌಂಟರ್ ಗೆ ಸಿಸಿ ಟಿವಿ ಕ್ಯಾಮೆರಾ ಅಳವಡಿಸಲಾಗಿತ್ತು ಎಂದರೆ ಸರಿ. ಅದೇ ರೀತಿ ಹಾಲ್ ಮತ್ತು ಲ್ಯಾಬ್ ನಲ್ಲಿ ಏನಾಗುತ್ತಿದೆ ಎಂದು ನೋಡಲು ಒಂದು ಸಿಸಿ ಟಿವಿ ಕ್ಯಾಮೆರಾ ಅಳವಡಿಸಲಾಗಿತ್ತು ಎಂದರೆ ಸರಿ. ಹಾಲ್ ನಲ್ಲಿ ಅಳವಡಿಸಲಾಗಿದ್ದ ಸಿಸಿ ಟಿವಿ ಕ್ಯಾಮೆರಾ ದಿಂದ ಕ್ಯಾಶ್ ಕೌಂಟರ್ ನಲ್ಲಿ ಆಗುತ್ತಿದ್ದ ಚಟುವಟಿಕೆಗಳ ಬಗ್ಗೆ ಸೆರೆಯಾಗುತ್ತಿತ್ತು ಎಂದರೆ ಸರಿ. ಸಿಸಿ ಟಿವಿ ಕ್ಯಾಮೆರಾಗಳು ಎಷ್ಟು ಮೆಗಾ ಫಿಕ್ಸೆಲ್ ಮತ್ತು ರೆಸೆಲ್ಯೂಷನ್ ಗಳವು ಎಂದು ಗೊತ್ತಿಲ್ಲ. ಪೊಲೀಸರು ನಮ್ಮ ಸೆಂಟರ್ ನಿಂದ ಸಿಸಿಟಿವಿ ಫೂಟೇಜ್ ಪಡೆದಿದ್ದಾರೆ. ಚಾ ಸಾ 2, 3, 6 ಮತ್ತು 7 ರವರು ನಮ್ಮ ಸೆಂಟರ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದು ಹೇಳುವ ಯಾವುದೇ ದಾಖಲೆಗಳನ್ನು ಪೊಲೀಸರಿಗೆ ನಾನು ಕೊಟ್ಟಿಲ್ಲ. ಪೊಲೀಸರು ನನ್ನ ಬಳಿ ದಾಖಲೆಗಳನ್ನು ಕೇಳಿ ಪಡೆದುಕೊಂಡಿರುವ ಬಗ್ಗೆ ನನಗೆ ನೆನಪಿಲ್ಲ. ನಾನು ಅಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿರುವ ಬಗ್ಗೆ ದಾಖಲೆಗಳನ್ನು ಪೊಲೀಸರಿಗೆ

ಕೊಟ್ಟಿರುವ ಬಗ್ಗೆ ನೆನಪಿಲ್ಲ. ಪ್ರತಿ ದಿನ ನಮ್ಮ ಸೆಂಟರ್ ನಲ್ಲಿ ಸಾವಿರಾರು ರುಪಾಯಿಯ ವ್ಯವಹಾರ ಆಗುತ್ತಿತ್ತು ಎಂದರೆ ಸರಿ. ನಮ್ಮ ಸೆಂಟರ್ ನಲ್ಲಿ ಪರಮನೆಂಟ್ ಸ್ಟಾಫ್ ಇಲ್ಲ ಎಂದರೆ ಸರಿ. ಪ್ರತಿದಿನದ ಒಟ್ಟು ವರಮಾನ ಹಾಗೂ ಖರ್ಚುಗಳ ರಿಜಿಸ್ಟರ್ ಅನ್ನು ನಾವು ಇಟ್ಟುಕೊಂಡಿದ್ದೆವು. ನಮ್ಮ ಸೆಂಟರ್ ಗೆ ಬಂದು ವರಮಾನ ಹಾಗೂ ಖರ್ಚುಗಳನ್ನು ಕಳೆದು ಬ್ಯಾಂಕ್ ಡೆಪಾಸೆಟ್ ಮಾಡಿ ಉಳಿದ ಹಣ ಎಷ್ಟು ಎಂಬುದರ ಬಗ್ಗೆ ರಿಜಿಸ್ಟರ್ ನಲ್ಲಿ ನಮೂದಿಸುತ್ತಿದ್ದೆವು ಎಂದರೆ ಸರಿ. ದಿನಾಂಕ 25.05.2018 ರಂದು ನಮ್ಮ ಸೆಂಟರ್ ಗೆ ಬಂದ ಆದಾಯವೆಷ್ಟು, ಖರ್ಚು ಎಷ್ಟು ಮತ್ತು  ಬ್ಯಾಂಕ್ ನಲ್ಲಿ ಡೆಪಾಸೆಟ್ ಮಾಡಿ ಉಳಿದ ಹಣ ಎಷ್ಟು ಎಂದು ರಿಜಿಸ್ಟರ್ ನಲ್ಲಿ ನಮೂದಿಸಿದ್ದೆವು ಎಂದರೆ ಸರಿ. ಆ ದಿನ ನಮ್ಮ ಕ್ಯಾಶ್ ಬಾಕ್ಸ್ ನಲ್ಲಿ ರೂ 2 ಸಾವಿರ ಹಣವನ್ನು ಇಟ್ಟಿದ್ದೆವು ಎಂಬುದರ ಬಗ್ಗೆ ಯಾವುದೇ ದಾಖಲೆಗಳನ್ನು ಪೊಲೀಸರಿಗೆ ಕೊಟ್ಟಿಲ್ಲ ಎಂದರೆ ಸರಿ. ಸದರಿ ರಿಜಿಸ್ಟರ್ ದಾಖಲೆಯನ್ನು ಪೊಲೀಸರಿಗೆ ಕೊಡಲು ನಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಚಾ ಸಾ 3 ರವರು ಸಹ ನಮ್ಮ ಸೆಂಟರ್ ನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ.

ನಮ್ಮ ಸೆಂಟರ್ ನ ಶೌಚಾಲಯದಲ್ಲಿ 1 ಸ್ಕೊಯರ್ ಫೀಟ್ ನ ಕಿಟಕಿ ಇತ್ತು ಎಂದರೆ ಸರಿ. ಸದರಿ ಕಿಟಕಿಗೆ ಅಡ್ಡಲಾಗಿ 3 ರಾಡ್ ಗಳನ್ನು ಅಳವಡಿಸಲಾಗಿತ್ತು ಎಂದರೆ ಸರಿ. ರಾಡ್ ಗಳನ್ನು ಕಟ್ ಮಾಡಿದ್ದ ಪೀಸ್ ಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರಾ ಎಂದರೆ ಸಾಕ್ಷಿಯು ಮೊದಲು ಇಲ್ಲ ಎಂದು ನಂತರ ಯೋಚನೆ ಇಲ್ಲ ಎಂದು ಹೇಳುತ್ತಾರೆ. ಬೇರೆ ಯಾರೂ ಆ ಕಿಟಕಿಯಿಂದ ಬರಬಾರದೆಂದು ಘಟನೆಯಾದ ದಿನದಂದೇ  ಬೇರೆ ರಾಡ್ ಗಳನ್ನು ಅಳವಡಿಸಿದ್ದೇವೆ ಎಂದರೆ ಸಾಕ್ಷಿಯು ಆ ದಿನ ಮಾಡಿಸಿಲ್ಲ ಬೇರೆ ಯಾವುದೋ ದಿನ ಮಾಡಿಸಿದ್ದೇವೆ ಈಗ ನೆನಪಿಲ್ಲ ಎಂದು ಹೇಳುತ್ತಾರೆ. ನಾನು ಸದರಿ ಸೆಂಟರ್ ನ ಮ್ಯಾನೇಜರ್ ಆಗಿದ್ದ ಕಾರಣ ಪ್ರತಿ ಘಟನೆಯ ಬಗ್ಗೆ ನನಗೆ ಗೊತ್ತಿರುತ್ತದೆ ಎಂದರೆ ಸರಿ. ಈಗ ಎಲ್ಲಾ ವಿಚಾರ ಗೊತ್ತಿದ್ದರೂ ಪೊಲೀಸರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಾತ್ ರೂಂ ನ ಬಾಗಿಲಿಗೆ ಅಳವಡಿಸಿದ್ದ ಲಾಕ್ ಕಾಮನ್ ಲಾಕ್ ಅಲ್ಲ ಅದು ಟರ್ನಿಂಗ್ ಲಾಕ್ ಎಂದರೆ ಸರಿ. ಒಳಗಡೆಯಿಂದ ಯಾರಾದರೂ ಲಾಕ್ ಮಾಡಿದರೆ ಹೊರಗಡೆ ಬರಲು ಆಗುವುದಿಲ್ಲ, ಅದೇ ರೀತಿ ಹೊರಗಡೆಯಿಂದ ಲಾಕ್ ಮಾಡಿದರೆ ಯಾರೂ ಒಳಗಡೆಯಿಂದ ಬರಲು ಆಗದಂತ ಲಾಕ್ ವ್ಯವಸ್ಥೆ ಇತ್ತು ಎಂದರೆ ಸರಿ. ಪ್ರತಿ ದಿನ ನಾವು ಸೆಂಟರ್ ಕ್ಲೊಸ್ ಮಾಡುವಾಗ ನಮ್ಮ ಸೆಂಟರ್ ನ ಎಲ್ಲಾ ರೂಂ ನ ಬಾಗಿಲುಗಳು, ಕಿಟಕಿ ಹಾಗೂ ಕ್ಯಾಶ್ ಕೌಂಟರ್ ಅನ್ನು ಲಾಕ್ ಮಾಡಿಯೇ ಕ್ಲೋಸ್ ಮಾಡುತ್ತಿದ್ದೆವು ಎಂದರೆ ಸರಿ. ನಮ್ಮ ಸಂಸ್ಥೆಗೆ ಬಂದ ಹಣಕಾಸನ್ನು ಸ್ವಾಗತಕಾರರು ನೋಡಿಕೊಳ್ಳುತ್ತಿದ್ದರು.  ಚಾ ಸಾ 6 ರವರು ನಮ್ಮ ಸಂಸ್ಥೆಗೆ ಬಂದ ಹಣದ ಬಗ್ಗೆ ನೋಡಿಕೊಳ್ಳುತ್ತಿದ್ದರು. ಕ್ಯಾಶ್ ಕೌಂಟರ್ ಹಾಗೂ ಬಾತ್ ರೂಂ ನ ಲಾಕರ್ ಗಳನ್ನು ಮುರಿದಿರಲಿಲ್ಲ ಎಂದರೆ ಸರಿ, ಸಾಕ್ಷಿಯು

ಮುಂದುವರಿದು ಅದು ಓಪನ್ ಆಗಿತ್ತು ಮುರಿದಿರಲಿಲ್ಲ ಎಂದು ಹೇಳುತ್ತಾರೆ.

ಘಟನೆಯನ್ನು ಕಂಡ ತಕ್ಷಣವೇ ದೂರು ಕೊಡಲು ತೊಂದರೆ ಇತ್ತೇ ಎಂದರೆ ಸಾಕ್ಷಿಯು ನಮ್ಮ ಸಂಸ್ಥೆಯ ಮೇಲಾಧಿಕಾರಿಗಳಿಗೆ ಮಾಹಿತಿ ಕೊಟ್ಟು ಅವರನ್ನು ಕೇಳಿಕೊಂಡು ನಂತರದಲ್ಲಿ ದೂರು ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ಘಟನೆಯನ್ನು ನೋಡಿದ ತಕ್ಷಣವೇ ನಾನು ನಮ್ಮ ಮಾಲೀಕರಿಗೆ ಫೋನ್ ಮೂಲಕ ಮಾಹಿತಿ ಕೊಟ್ಟಿದ್ದೇನೆ. ನಮ್ಮ ಸಂಸ್ಥೆಯ ಮಾಲಿಕರು ಸ್ಕ್ಯಾನಿಂಗ್ ಡಾಕ್ಟರ್ ಆಗಿದ್ದು ಅವರು ಪ್ರತಿ ದಿನ ನಮ್ಮ ಸಂಸ್ಥೆಗೆ ಬರುತ್ತಿದ್ದರು. ನಾನು ಘಟನೆಯನ್ನು ನೋಡಿ ಫೋನ್ ಮಾಡಿದ ತಕ್ಷಣ ಬೆಳಗ್ಗೆ ಸುಮಾರು 9.30 ರ ಸುಮಾರಿಗೆ ಸಂಸ್ಥೆಯ ಮಾಲೀಕರು ಅಲ್ಲಿಗೆ ಬಂದಿದ್ದರು. ಈ ಪ್ರಕರಣದಲ್ಲಿ ಎಷ್ಟು ಸಹಿ ಮಾಡಿದ್ದೇನೆ ಎಂದು ನೆನಪಿಲ್ಲ. ಎಲ್ಲೆಲ್ಲಿ ಸಹಿ ಮಾಡಿದ್ದೀರಿ ಎಂದರೆ ಸಾಕ್ಷಿಯು ಒಂದು ಸಹಿ ಪೊಲೀಸ್ ಠಾಣೆಯಲ್ಲಿ, ಇನ್ನೊಂದು ಸಹಿ ನಮ್ಮ ಸೆಂಟರ್ ನಲ್ಲಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ಯಾವ ದಾಖಲೆಗೆ ನಾನು ಸಹಿ ಮಾಡಿದ್ದೇನೆ ಎಂದು ಈಗ ನೆನಪಿಲ್ಲ. ಮಹಜರ್ ಅನ್ನು ನಾನು ಓದಿ ನೋಡಿದ್ದೇನೆ. ನಮ್ಮ ಸಂಸ್ಥೆಯಲ್ಲಿ ಯಾವುದೇ ಕಳ್ಳತನದ ಘಟನೆಯಾಗದೇ ಇದ್ದರೂ ನಮ್ಮ ಸಂಸ್ಥೆಯಲ್ಲಿ ಆಗಿದ್ದ ಹಣದ ಅವ್ಯವಾಹಾರವನ್ನು ಮುಚ್ಚಿಹಾಕುವ ಸಲುವಾಗಿ ಸುಳ್ಳು ದೂರು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಹಣದ ಅವ್ಯವಾಹಾರದ ಬಗ್ಗೆ ನಮ್ಮ ಮಾಲೀಕರಿಗೆ ತಿಳಿದರೆ ತೊಂದರೆಯಾಗುತ್ತದೆ ಎಂದು ಪೊಲೀಸರಿಗೆ ನಾವು ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೂ, ಆರೋಪಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಃ-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.